# ಬುದ್ಧ ಮತ್ತು ಮಾರ

ಸ್ವಾಮಿ ಕರುಣಾಕರಾನಂದ

(ಬುದ್ಧನ ಜೀವನಚರಿತ್ರೆಯನ್ನು ಕುರಿತು ಚಿಂತಿಸಿದಾಗಲೆಲ್ಲ ಅನೇಕ ಪ್ರಸಿದ್ಧ ಘಟನೆಗಳು ನಮ್ಮ ಕಣ್ಣ ಮುಂದೆ ಹಾದುಹೋಗುತ್ತವೆ. ಕೆಲವು ಅವನ ಜೀವಕಾರುಣ್ಯವನ್ನು ಬಿಂಬಿಸಿದರೆ, ಇನ್ನು ಕೆಲವು ಅವನ ಅತಿಮಾನುಷ ವ್ಯಕ್ತಿತ್ವವನ್ನು ಬಿಂಬಿಸುತ್ತವೆ. ಆದರೆ, ಸಾಧಕ ನಾದವನು ಬುದ್ಧನ ಜೀವನವನ್ನು ನೋಡುವ ದೃಷ್ಟಿಯೇ ಬೇರೆ. ತನ್ನ ಜ್ಞಾನಪ್ರಾಪ್ತಿಯ ಹಾದಿಯಲ್ಲಿ ಏನೇನು ಅಡೆತಡೆಗಳು ಬರಬಹುದು ಹಾಗೂ ಅವನ್ನು ಪರಿಹರಿಸುವುದು ಹೇಗೆ ಎಂಬುದೇ ಅವನ ಆದ್ಯತೆಯಾಗಿರುತ್ತದೆ. ಆಧ್ಯಾತ್ಮಿಕ ಜೀವನದಲ್ಲಿ ಬರುವ ಅಡೆತಡೆಗಳನ್ನು ಬುದ್ಧನ ಜೀವನದಲ್ಲಿ ಬರುವ ಮಾರನ ಪಾತ್ರವು ಪ್ರತಿನಿಧಿಸುತ್ತದೆ. ಮಾರನ ಕುರಿತಾದ ಹಲವು ಘಟನೆಗಳು ಬೌದ್ಧರ ಧರ್ಮಗ್ರಂಥಗಳಾದ ತ್ರಿಪಿಟಕಗಳಲ್ಲಿ, ಎರಡನೆ ಶತಮಾನದ ಅಶ್ವಘೋಷನು ರಚಿಸಿರುವ ಬುದ್ಧಚರಿತವೆಂಬ ಕಾವ್ಯದಲ್ಲಿ ಮತ್ತು ಲಲಿತವಿಸ್ತರವೆಂಬ ಇನ್ನೊಂದು ಅರ್ವಾಚೀನ ಗ್ರಂಥದಲ್ಲಿ ಅಲ್ಲಲ್ಲಿ ಸಿಗುತ್ತವೆ. ಅವನ್ನು ಇಲ್ಲಿ ಒಂದೆಡೆ ಓದುಗರ ಮುಂದಿಡುತ್ತಿದ್ದೇವೆ.)

**ದೃಶ್ಯ–೧ :** ಲುಂಬಿನಿಯಲ್ಲಿ ಸಿದ್ಧಾರ್ಥನ ಜನನವಾದಾಗ ಬ್ರಹ್ಮಾದಿ ದೇವತೆಗಳಿಗೆಲ್ಲ ಅತ್ಯಂತ ಸಂತೋಷವಾಯಿತು. ಪ್ರಕೃತಿಯಲ್ಲಿ ಎಲ್ಲೆಲ್ಲೂ ಆನಂದ ಹಾಗೂ ಶಾಂತಿ ತುಂಬಿದೆ. ಹಿಂಸ್ರ ಪಶುಗಳು ತಮ್ಮ ಹಿಂಸಾವೃತ್ತಿಯನ್ನು ತೊರೆದಿವೆ. ಆದರೆ ಮಾರನಿಗೆ ಮಾತ್ರ ದುಃಖವಾಯಿತು.

**ದೃಶ್ಯ–೨ :** ಸಿದ್ಧಾರ್ಥ ಲೋಕದ ದುಃಖದಿಂದ ನೊಂದು ಶಾಂತಿಯನ್ನು ಅರಸಲು, ಅರಮನೆಯನ್ನು ತೊರೆದು ಹೊರಟಿದ್ದಾನೆ. ತನ್ನ ಕುದುರೆ ಕಂಥಕನ ಬೆನ್ನೇರಿ ಅವನು ದ್ವಾರದ ಬಳಿ ಬಂದಿದ್ದಾನೆ. ಅಲ್ಲಿ ಮಾರ ಮುಗುಳ್ನಗುತ್ತ ನಿಂತಿದ್ದಾನೆ! “ಓ, ನನ್ನೊಡೆಯ, ನಿಲ್ಲು. ಎಲ್ಲಿಗೆ ಹೊರಟೆ? ಇನ್ನು ಏಳೇ ದಿನಗಳಲ್ಲಿ ಸಾಮ್ರಾಜ್ಯದ ಆಧಿಪತ್ಯವು ನಿನ್ನದಾಗುವುದು. ನಾಲ್ಕು ಖಂಡಗಳಿಗೆ ಹಾಗೂ ಅದರ ಸುತ್ತಮುತ್ತಲಿನ ಎರಡು ಸಾವಿರ ದ್ವೀಪಗಳಿಗೆ ನೀನೇ ಸ್ವಾಮಿಯಾಗುವೆ. ಆದ್ದರಿಂದ, ಓ ಪ್ರಭು, ನಿಲ್ಲು” ಎಂದು ಅವನು ಪ್ರಾರ್ಥಿಸಿದ.

ಸಿದ್ಧಾರ್ಥ ಹೇಳಿದ, “ಸಾಮ್ರಾಜ್ಯದ ಆಧಿಪತ್ಯ ನನ್ನನ್ನರಸಿಕೊಂಡು ಬರುವುದಾಗಿ ನಾನು ಬಲ್ಲೆ. ಆದರೆ ನನಗೆ ಸಾಮ್ರಾಜ್ಯ ಬೇಕಿಲ್ಲ. ನಾನು ಬುದ್ಧನಾಗುತ್ತೇನೆ, ಸಮಸ್ತ ಪ್ರಪಂಚವೂ ಆನಂದದಿಂದ ಕೇಕೆ ಹಾಕುವಂತೆ ಮಾಡುತ್ತೇನೆ.” ಮಾರ ಅಲ್ಲಿಂದ ಕಾಲ್ತೆಗೆದ, ಮುಂದಿನ ಶೀಘ್ರ ಭೇಟಿಗಾಗಿ ದಿನವೊಂದನ್ನು ಲೆಕ್ಕ ಹಾಕುತ್ತ.

**ದೃಶ್ಯ–೩ :** ಬೋಧಿಸತ್ವನು ಉರುವೇಲದ ಅರಣ್ಯದಲ್ಲಿ ಸಂಸಾರದಿಂದ ಪಾರಾಗುವ ಉದ್ದೇಶದಿಂದ ಘೋರ ತಪಸ್ಸನ್ನಾಚರಿಸುತ್ತಿದ್ದಾನೆ. ಪ್ರತಿದಿನ ಒಂದು ಹಿಡಿಯಷ್ಟು ಆಹಾರ ಮಾತ್ರ ಅವನ ದೇಹ ಸೇರುತ್ತಿದೆ. ಅವನು ದಿನೇ ದಿನೇ ಸೊರಗುತ್ತಿದ್ದಾನೆ. ಒಂದು ದಿನ ಬೋಧಿಸತ್ವನು ಸುಮ್ಮನೆ ಕುಳಿತುಕೊಂಡಿದ್ದಾಗ, ಮಾರ ಅಲ್ಲಿಗೆ ಬಂದ. “ಓ ಪ್ರಭುವೆ! ಏನಿದು ನಿನ್ನ ಅವಸ್ಥೆ? ಉಪವಾಸದಿಂದ ನೀನು ಅಸ್ಥಿ ಮಾಂಸಗಳ ಪಂಜರವಾಗಿರುವೆ. ನಿನ್ನ ಈ ತಪಸ್ಸಿನ ಪ್ರಯೋಜನ ಇದೇ ಏನು? ಸಾವಿನ ದವಡೆಯಲ್ಲಿ ಸಿಕ್ಕಿರುವೆಯಲ್ಲ? ಮನುಷ್ಯ ಬದುಕಿದ್ದರೆ ಏನನ್ನಾದರೂ ಸಾಧಿಸಬಹುದು. ನೀನು ಜೀವಂತವಿದ್ದರೆ ಲೋಕಕ್ಕೆ ಬಹಳ ಉಪಕಾರ ಮಾಡಬಹುದಲ್ಲವೆ?” ಎಂದು ಕರುಣಾಪೂರ್ಣ ಧ್ವನಿಯಿಂದ ಸಲಹೆಯಿತ್ತ.

ಶಾಕ್ಯಮುನಿ ಕಿಂಚಿತ್ತೂ ವಿಚಲಿತನಾಗದೆ ಮುಗುಳ್ನಗುತ್ತ ಉತ್ತರಿಸಿದ, “ಓ ದುಷ್ಟನೆ! ಯಾವ ಉದ್ದೇಶದಿಂದ ನೀನು ಇಲ್ಲಿಗೆ ಬಂದೆ? ಮನಸ್ಸು ಶಾಂತವಾಗುವುದಾದರೆ, ಸಮಾಧಿಯಲ್ಲಿ ಹೆಚ್ಚು ಹೆಚ್ಚು ನಿಲ್ಲುವುದಾದರೆ, ಈ ದೇಹದ ಮಾಂಸ ಶುಷ್ಕವಾಗಲಿ, ಅದಕ್ಕೇನಂತೆ? ಈ ಜಗತ್ತಿನಲ್ಲಿ ಜೀವಿಸುವುದರಿಂದ ನನಗೇನಾಗ ಬೇಕು? ಯುದ್ಧದಲ್ಲಿ ಸೋತು ಬದುಕುವುದಕ್ಕಿಂತ ಹೋರಾಡಿ ಸಾಯುವುದೇ ಲೇಸೆಂದು ನಾನು ಭಾವಿಸುತ್ತೇನೆ.”

ಮಾರನು ಅಲ್ಲಿಂದ ಕಾಲ್ತೆಗೆಯುತ್ತ ಮನಸ್ಸಿನಲ್ಲೇ ಗೊಣಗಿಕೊಂಡ, “ಏಳು ವರ್ಷಗಳಿಂದ ಸತತವಾಗಿ ಹೆಜ್ಜೆಹೆಜ್ಜೆಗೂ ನಾನು ಇವನ ಬೆನ್ನು ಹತ್ತಿದ್ದೇನೆ. ಒಂದು ಕ್ಷಣವೂ ಇವನಲ್ಲಿ ಯಾವ ದೋಷವನ್ನೂ ಕಾಣದೆ ಹೋದೆನಲ್ಲ.”

**ದೃಶ್ಯ–೪ :** ಸಿದ್ಧಾರ್ಥನು ಘೋರ ತಪಸ್ಸನ್ನು ಕೊನೆಗಾಣಿಸಿ ಮಧ್ಯಮ ಪಥದಲ್ಲಿ ನಡೆಯಲು ತೀರ್ಮಾನಿಸಿದ್ದಾನೆ. ನೇರಂಜರ ನದಿಯಲ್ಲಿ ಸ್ನಾನ ಮಾಡಿ, ಸುಜಾತಳೆಂಬ ಕನ್ಯೆಯೊಬ್ಬಳು ಕೊಟ್ಟ ಪಾಯಸವನ್ನು ಸೇವಿಸಿ ದೃಢನಿಶ್ಚಯನಾಗಿ ಬೋಧಿವೃಕ್ಷದೆಡೆಗೆ ಹೆಜ್ಜೆಯಿಕ್ಕುತ್ತಿದ್ದಾನೆ. ಅವನ ನಡಿಗೆಗೆ ಭೂಮಿ ಕಂಪಿಸುತ್ತಿದೆ, ದಿಕ್ಕುಗಳು ಎಲ್ಲೆಲ್ಲೂ ಬೆಳಕಿನಿಂದ ತುಂಬಿಕೊಂಡಿವೆ.

ಅವನು ಆ ವೃಕ್ಷದಡಿಯಲ್ಲಿ ಕುಳಿತಾಗ ದಿವ್ಯಲೋಕ, ಮರ್ತ್ಯಲೋಕವೆರಡೂ ಸಂಭ್ರಮಿಸಿದವು. ಧರ್ಮದ ವೈರಿಯಾದ ಮಾರ ಮಾತ್ರ ತಲ್ಲಣಿಸಿದನು. ಅವನಿಗೆ ವಿಭ್ರಮ, ಹರ್ಷ, ದರ್ಪರೆಂಬ ಮೂರು ಗಂಡುಮಕ್ಕಳೂ, ರತಿ, ಪ್ರೀತಿ, ತೃಷ್ಣೆಯರೆಂಬ ಮೂರು ಹೆಣ್ಣುಮಕ್ಕಳೂ ಇದ್ದರು. ತಮ್ಮ ತಂದೆ ಇಷ್ಟು ಖಿನ್ನನಾಗಿದ್ದುದನ್ನು ಅವರೆಂದೂ ನೋಡಿರಲಿಲ್ಲ. ಅವನ ದುಃಖಕ್ಕೆ ಕಾರಣ ಕೇಳಿದಾಗ ಮಾರ ಉತ್ತರಿಸುತ್ತಾನೆ: “ಮಕ್ಕಳೆ, ಅದೋ ಮುಂದಿರುವ ಆ ವಿಶಾಲ ವೃಕ್ಷದಡಿಯಲ್ಲಿ ದೃಢ ನಿಶ್ಚಯವೆಂಬ ಕವಚವನ್ನು ಧರಿಸಿ,

ಪೂಜ್ಯ ಸ್ವಾಮೀಜಿಯವರು ಮೈಸೂರಿನ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಉತ್ತಮ ವಾಗ್ಮಿಗಳು ಮತ್ತು ಬರಹಗಾರರು.

ಸತ್ಯವೆಂಬ ಚೂಪಾದ ತುದಿಯನ್ನುಳ್ಳ ಪ್ರಜ್ಞೆಯೆಂಬ ಬಾಣವನ್ನು ಎತ್ತಿಹಿಡಿದು, ನನಗೆ ಸೇರಿದ ಲೋಕಗಳನ್ನು ಗೆಲ್ಲಬೇಕೆಂದಿರುವ ಆ ಮುನಿಯನ್ನು ನೋಡಿ! ನನ್ನ ದುಃಖಕ್ಕೆ ಅವನೇ ಕಾರಣ. ಒಂದು ವೇಳೆ ನನ್ನನ್ನು ಆತ ಸೋಲಿಸಿ ಜಗತ್ತಿಗೆ ಆತ್ಯಂತಿಕ ಸುಖದ ಬೋಧನೆ ಮಾಡಿದ್ದೇ ಆದರೆ, ನನ್ನ ಈ ಲೋಕ ಆ ಕ್ಷಣದಲ್ಲಿ ಬರಿದಾಗುತ್ತದೆ. ಆದ್ದರಿಂದ, ಆತ ಇನ್ನೂ ನನ್ನ ಅಂಕೆಯಲ್ಲಿರುವಾಗಲೇ, ಅಧ್ಯಾತ್ಮ ದೃಷ್ಟಿಯನ್ನು ಗಳಿಸಿಕೊಳ್ಳುವ ಮೊದಲೇ, ನೆರೆಯಿಂದ ಉಕ್ಕುತ್ತಿರುವ ನದಿಯು ಅಣೆಕಟ್ಟನ್ನು ಒಡೆಯುವಂತೆ ಅವನು ತನ್ನ ವ್ರತವನ್ನು ಮುರಿಯುವಂತೆ ನಾನು ಮಾಡುತ್ತೇನೆ."

ಹೀಗೆ ಹೇಳಿ ಕುಸುಮಾಯುಧವನ್ನೂ, ಮನವನ್ನು ಕೆರಳಿಸುವ ಐದು ಬಾಣಗಳನ್ನೂ ಹಿಡಿದು ತನ್ನ ಮಕ್ಕಳೊಂದಿಗೆ ಮಾರನು ಅಶ್ವತ್ಥವೃಕ್ಷದ ಬುಡಕ್ಕೆ ಹೋದನು. ಕೈಯಲ್ಲಿ ಬಾಣವನ್ನು ಹಿಡಿದು ಆಟವಾಡುತ್ತ, ಸಂಸಾರಸಾಗರವನ್ನು ದಾಟಲು ಉದ್ಯುಕ್ತನಾಗಿ ಶಾಂತನಾಗಿ ಕುಳಿತುಕೊಂಡಿದ್ದ ಶಾಕ್ಯಮುನಿಯನ್ನುದ್ದೇಶಿಸಿ ಮಾರನು ಹೀಗೆ ಹೇಳಿದನು: "ಏಳು, ಏಳು, ಓ ಕ್ಷತ್ರಿಯನೆ! ಸಾವಿಗೆ ಹೆದರಿ ಕುಳಿತಿರುವೆಯೇನು? ನಿನ್ನ ಸ್ವಧರ್ಮವನ್ನು ಮಾಡು. ಈ ಮುಕ್ತಿ ಮಾರ್ಗವನ್ನು ಬಿಡು. ನಿನ್ನ ಬಾಣಗಳಿಂದ ಮರ್ತ್ಯಲೋಕವನ್ನು ಗೆದ್ದು, ಇಂದ್ರನು ಆಳುವ ಉತ್ತಮ ಲೋಕಕ್ಕೆ ಲಗ್ಗೆ ಹಾಕು. ಹಿಂದೆ ಮಾನವೇಂದ್ರರು ಆ ಉತ್ತಮ ಮಾರ್ಗದಲ್ಲಿಯೇ ನಡೆದಿದ್ದಾರೆ. ಉಚ್ಚ ರಾಜಕುಲದಲ್ಲಿ ಜನಿಸಿದ ನಿನಗೆ ಈ ಭಿಕ್ಷುವಿನ ಜೀವನ ತರವಲ್ಲ. ಒಂದು ವೇಳೆ ನೀನು ನಿನ್ನ ಉದ್ದೇಶದಲ್ಲಿ ಅವಿಚಲನೆಂದಾದರೆ, ನೀನು ಕೈಗೊಂಡಿರುವ ನಿರ್ಧಾರವನ್ನು ಬಿಡದೆ ಹೋದರೆ, ನಾನು ಹೆದೆಗೇರಿಸಿರುವ ಈ ಬಾಣವನ್ನು ನೋಡು. ಇದರ ಪ್ರಯೋಗದಿಂದ ಸೂರ್ಯಕ, ಪುರೂರವ, ಶಂತನು–ಎಲ್ಲರೂ ತಮ್ಮ ಮನಸ್ಸಿನ ಸ್ವಾಧೀನವನ್ನು ಕಳೆದುಕೊಂಡರು. ಆದ್ದರಿಂದ ಬೇಗ ನಿನ್ನ ನಿರ್ಧಾರ ಬಿಟ್ಟು ಮೇಲೇಳು."

ಇಷ್ಟಾದರೂ ಶಾಕ್ಯಮುನಿ ಮಿಸುಕಾಡಲಿಲ್ಲ. ಮಾರನು ಕೋಪಗೊಂಡು ಬಾಣವನ್ನು ಪ್ರಯೋಗಿಸಿದನು. ಬಾಣ ತನ್ನ ಮೇಲೆ ಯಾವ ಪರಿಣಾಮವನ್ನೂ ಬೀರಲಿಲ್ಲವೇನೋ ಎಂಬಂತೆ ಮುನಿ ತನ್ನ ಸ್ಥಳದಲ್ಲಿ ಅಲುಗಾಡದೆ ಕುಳಿತುಕೊಂಡಿದ್ದನು. ಅವನನ್ನು ಕಂಡು ಮಾರನ ಜಂಘಾಬಲವೇ ಅಡಗಿಹೋಯಿತು. ಕುಸಿದು ಕುಳಿತು ಮೆಲ್ಲನೆಯ ಧ್ವನಿಯಲ್ಲಿ ಯೋಚನಾಮಗ್ನನಾಗಿ ತನ್ನಷ್ಟಕ್ಕೆ ತಾನು ಹೇಳಿಕೊಂಡನು: "ಯಾವ ಬಾಣವು ದೇವ ಶಂಭುವಿನ ಮನದಲ್ಲಿ ಪರ್ವತನ ಕನ್ಯೆಯ (ಪಾರ್ವತಿ) ಕುರಿತಾದ ಪ್ರೀತಿಯನ್ನು ಉಂಟುಮಾಡಿ, ಅವನ ವ್ರತಭಂಗ ಮಾಡಿತೋ, ಅದರಿಂದ ಹೊಡೆಯಲ್ಪಟ್ಟಿದ್ದೇನೆ ಎನ್ನುವುದೂ ಈ ಮುನಿಯ ಗಮನಕ್ಕೆ ಬರಲಿಲ್ಲವೆ? ಈ ಮುನಿಯೇನು ಭಾವನಾಶೂನ್ಯನೇ? ಇದು ಅದೇ ಬಾಣವಲ್ಲವೆ? ಇವನ ಮೇಲೆ ನನ್ನ 'ಹರ್ಷಣ' ಎಂಬ ಬಾಣವೂ ಕೆಲಸ ಮಾಡಲಿಲ್ಲ, ನನ್ನ ಮಗಳಾದ ರತಿಯಿಂದಲೂ ಇವನ ಮನ ಚಲಿಸಲಿಲ್ಲ. ಇದೀಗ ಭೂತಗಣಗಳನ್ನು ಬಿಟ್ಟು ಇವನನ್ನು ಹೆದರಿಸಬೇಕು, ಕೆಟ್ಟ ಮಾತುಗಳಿಂದ ಬಯ್ಯಿಸಬೇಕು ಇಲ್ಲವೇ ಹೊಡೆಸಬೇಕು."

ಮಾರನು ಮನಸ್ಸಿನಲ್ಲಿ ಹೀಗೆ ಸ್ಮರಿಸುತ್ತಿದ್ದಂತೆ ಎಂಥವರನ್ನೂ ಭಯಗೊಳಿಸುವ ಹಂದಿ, ಮೀನು, ಕುದುರೆ, ಕತ್ತೆ, ಒಂಟೆ ಮೊದಲಾದ ಪ್ರಾಣಿಗಳ ವಿಚಿತ್ರ ಮುಖಗಳನ್ನು ಹೊಂದಿರುವ, ಬಾಣಗಳು, ಮರಗಳು, ಈಟಿಗಳು ಮುಂತಾದ ಬಗೆ ಬಗೆಯ ಆಯುಧಗಳನ್ನು ಧರಿಸಿರುವ ಅನೇಕ ವಿಕೃತ ಆಕೃತಿಗಳು ಬುದ್ಧನ ಸುತ್ತ ಬಂದು ಸೇರಿದವು; ತಮ್ಮ ವಿವಿಧ ಆಯುಧಗಳಿಂದ ಮುನಿಯನ್ನು ಘಾಸಿಗೊಳಿಸಲು ನೋಡಿದವು. ಆದರೆ, ಬೋಧಿಸತ್ವನ ಶ್ರದ್ಧೆ, ವೀರ್ಯ ಹಾಗೂ ಪ್ರಜ್ಞೆಗಳೆಂಬ ಆಯುಧಗಳ ಮುಂದೆ ಅವುಗಳ ಎಲ್ಲ ಆಯುಧಗಳೂ ನಿಷ್ಫಲಗೊಂಡವು. ಇದನ್ನು ನೋಡಿದ ಮಾರ ಮತ್ತು ಅವನ ಶಕ್ತಿಗಳು ಓಡಿ ಹೋದರು. ಹೀಗೆ ಮಾರನನ್ನು ಜಯಿಸಿ ಸಾಧನೆಯ ತುತ್ತತುದಿಯಾದ ಸಂಬೋಧಿಯನ್ನು ಸಿದ್ಧಾರ್ಥನು ಗಳಿಸಿ ಬುದ್ಧನೆನಿಸಿಕೊಂಡನು.

**ದೃಶ್ಯ–೫ :** ಬುದ್ಧನು ಸಂಬೋಧಿಯನ್ನು ಹೊಂದಿ ನಾಲ್ಕು ವಾರಗಳವರೆಗೆ ಅದೇ ಆನಂದದಲ್ಲಿದ್ದನು. ಸಮಂತಕುಸುಮನೆಂಬ ದೇವನು ಅಲ್ಲಿಗೆ ಬಂದು ಬುದ್ಧನ ಕುಶಲ ವಿಚಾರಿಸಿದನು. ಅವನ ಪ್ರಶ್ನೆಗೆ ಉತ್ತರಿಸುತ್ತ ಬುದ್ಧನು ಹೀಗೆಂದನು: "ಹಿಂದೆ ಅರ್ಹತ ಪದಕ್ಕೇರಿದ ಬುದ್ಧರೆಲ್ಲ ಈ ಬೋಧಿವೃಕ್ಷವನ್ನು ಬಿಟ್ಟು ಹೋಗಲಿಲ್ಲ. ಇಲ್ಲಿಯೆ ನನ್ನಿಂದ ಕ್ಲೇಶ ಮತ್ತು ಅಜ್ಞಾನದಿಂದೊಡಗೂಡಿದ ಮಾರರು ಜಯಿಸಲ್ಪಟ್ಟರು; ಜಗತ್ತನ್ನು ಉದ್ಧರಿಸುವ ಶುದ್ಧಜ್ಞಾನವು ಇಲ್ಲಿಯೆ ನನಗೆ ಪ್ರಾಪ್ತವಾಯಿತು. ಹಿಂದೆ ಆಗಿ ಹೋದ ಬುದ್ಧರ ಉಪದೇಶದಂತೆ ನಡೆಯಲು ತೀರ್ಮಾನಿಸಿದ್ದೇನೆ."

ಈ ಮಾತುಗಳನ್ನು ಅಲ್ಲಿಯೆ ಮರೆಯಲ್ಲಿ ಕೇಳಿಸಿಕೊಂಡ ಮಾರನಿಗೆ ಎಲ್ಲಿ ಈತ ತನ್ನ ಬಗ್ಗೆ ಜಗತ್ತಿಗೆ ಸಾರಿ ಹೇಳುತ್ತಾನೋ ಎಂದು ಅತೀವ ಭಯವಾಯಿತು. ಆತ ತಕ್ಷಣ ಬುದ್ಧನ ಎದುರು ಬಂದು ನಿಂತು ನುಡಿದ, "ಭಗವಂತನೆ, ನಿನ್ನ ಆಸೆ ತೀರಿತಲ್ಲ. ಈಗಲಾದರೂ ಮಹಾನಿರ್ವಾಣವನ್ನು ಹೊಂದು."

ಆಗ ಬುದ್ಧ ಹೇಳುತ್ತಾನೆ, "ಮೊದಲು ನಾನು ಈ ಮರಳಿನ ಕಣಗಳಷ್ಟು ಅಸಂಖ್ಯ ಲೋಕಗಳಲ್ಲಿ ನನ್ನ ಜ್ಞಾನವನ್ನು ಹರಡಬೇಕು. ನಂತರ ನೀನೆಂದಂತೆ ಮಹಾನಿರ್ವಾಣವನ್ನು ಹೊಂದುತ್ತೇನೆ."

ಮಾರ ಜೋರಾಗಿ ಕೂಗು ಹಾಕುತ್ತ ಮನೆಗೆ ಹೋದ. ತಂದೆಯ ದುಃಖವನ್ನು ಕಂಡು ಮಕ್ಕಳಾದ ರತಿ, ಪ್ರೀತಿ ಮತ್ತು ತೃಷ್ಣೆಯರು ಬುದ್ಧನ ಬಳಿಗೆ ಬಂದರು.

ರತಿಯು ಬುದ್ಧನಿಗೆ ಗೃಹಸ್ಥ ಜೀವನದ ಸುಖಗಳನ್ನು ವರ್ಣಿಸಿ, "ಒಬ್ಬ ಚಕ್ರವರ್ತಿಯ ಸುಖವನ್ನು ತ್ಯಾಗ ಮಾಡಿ ನೀನು ಏನನ್ನು ತಾನೆ ಸಾಧಿಸಿದೆ ಎಂಬುದಾಗಿ ಆಲೋಚಿಸು. ಅಂತಹ ಭಾಗ್ಯವನ್ನೇ ಬಿಟ್ಟ ಮೇಲೆ ಇನ್ನು ಏನು ತಾನೆ ಅನುಭವಿಸುವುದಿದೆ ಎಂಬುದಾಗಿ ಆಲೋಚಿಸು. ಬಾ, ನಮ್ಮಲ್ಲಿ ಆಶ್ರಯವನ್ನು ಪಡೆ" ಎಂದು ಸಲಹೆ ನೀಡಿದಳು.

ತೃಷ್ಣೆಯು, "ಸಾಂಸಾರಿಕ ಹಾಗೂ ಸಾಮಾಜಿಕ ಕರ್ತವ್ಯಗಳನ್ನು ತ್ಯಜಿಸಿದ ನಿನಗೆ ಧಿಕ್ಕಾರವಿರಲಿ. ಅಧಿಕಾರವಿಲ್ಲದೆ ಯಾವ ತಪಸ್ಸು,

ಯಜ್ಞ ಅಥವಾ ವ್ರತಕ್ಕೂ ಬೆಲೆ ಇಲ್ಲ. ನನ್ನನ್ನು ಪೂಜಿಸು. ಇಲ್ಲವೆ, ನನ್ನ ಶಕ್ತಿಯನ್ನು ನೋಡು" ಎಂದು ಬೆದರಿಸಿದಳು.

ಪ್ರೀತಿ ಹೇಳಿದಳು: "ಈ ಸೃಷ್ಟಿಯಲ್ಲಿರುವ ಎಲ್ಲ ಭೋಗಭಾಗ್ಯಗಳನ್ನೂ ತಂದು ನಿನ್ನ ಮುಂದಿಡುತ್ತೇನೆ. ನನಗೆ ಶರಣಾಗು."

ಬುದ್ಧನು ಇವರಾರ ಮಾತುಗಳೂ ತನ್ನ ಕಿವಿಗಳಿಗೆ ಬಿದ್ದೇ ಇಲ್ಲವೇನೋ ಎಂಬಂತೆ, ಜಗತ್ತಿನ ದೃಷ್ಟಿಗೆ ಸತ್ತಂತೆ, ಧ್ಯಾನದಲ್ಲಿ ಮುಳುಗಿಹೋಗಿದ್ದನು. ನಂತರ ಆ ಮೂವರೂ ಬೇರೊಂದು ವಿಧದಲ್ಲಿ ಬುದ್ಧನನ್ನು ಮೋಹಗೊಳಿಸಲು ನಿಶ್ಚಯಿಸಿದರು. ಅವರು ಮುದುಕಿಯರ ರೂಪದಲ್ಲಿ ಬುದ್ಧನ ಮುಂದೆ ಕಾಣಿಸಿಕೊಂಡು ಪ್ರಾರ್ಥಿಸುವ ಧ್ವನಿಯಲ್ಲಿ ಹೇಳಿದರು, "ಹೇ ಭಗವನ್, ನಿಮ್ಮ ಕೀರ್ತಿ ಬಹಳ ದೂರದವರೆಗೂ ಹಬ್ಬಿದೆ. ನೀನು ಅವತಾರಗಳಲ್ಲಿ ಒಬ್ಬನಂತೆ. ನಾವು ನಿಜವಾದ ಧರ್ಮಕ್ಕಾಗಿ ಬಹಳ ಅಲೆದು ಬಳಲಿ ಬಂದಿದ್ದೇವೆ. ನಮಗೂ ಬಹಳ ವಯಸ್ಸಾಗಿದೆ. ದಯವಿಟ್ಟು ನಮಗೆ ಸರಿಯಾದ ಮಾರ್ಗವನ್ನು ತೋರಿಸು." ಬುದ್ಧನಿಗೆ ಇವರಾರೆಂದು ತಿಳಿದಿದ್ದರೂ ಕೋಪಿಸಿಕೊಳ್ಳಲಿಲ್ಲ. ತನ್ನಷ್ಟಕ್ಕೆ ತಾನು ಧ್ಯಾನದಲ್ಲಿ ಲೀನನಾದ. ಅವನ ದಿವ್ಯಶಕ್ತಿಯಿಂದ ಮಾರನ ಕನ್ಯೆಯರಿಗೆ ನಿಜವಾಗಿಯೂ ವೃದ್ಧತ್ವ ಪ್ರಾಪ್ತವಾಯಿತು. ಭಯದಿಂದ ತಂದೆಯ ಬಳಿಗೆ ಹೋಗಿ ತಮ್ಮ ಯೌವ್ವನ ಮರುಕಳಿಸುವಂತೆ ಅವರು ಕೇಳಿಕೊಂಡರು. ಮಾರನು ಅವರನ್ನು ಬುದ್ಧನ ಬಳಿಗೇ ಹೋಗಿ ಪ್ರಾರ್ಥಿಸಿರೆಂದು ಕಳಿಸಿಕೊಟ್ಟ. ಅವರು ಬುದ್ಧನ ಬಳಿಗೆ ಓಡಿ ಬಂದು, ತಮ್ಮ ತಪ್ಪನ್ನು ಮನ್ನಿಸುವಂತೆ ಅವನನ್ನು ಗೋಗರೆದರು. ಬುದ್ಧನ ಕರುಣೆಯಿಂದ ಅವರಿಗೆ ಪುನಃ ಯೌವ್ವನ ಪ್ರಾಪ್ತವಾಯಿತು.

ಬುದ್ಧ ಅವರಿಗೆ ಹೇಳುತ್ತಾನೆ, "ಒಂದು ದೊಡ್ಡ ಬಂಡೆಯನ್ನು ಕಮಲದ ದಳದಿಂದ ಒಡೆಯುವಂತೆ, ಉಗುರಿನಿಂದ ಬೆಟ್ಟವನ್ನು ಕೊರೆಯುವಂತೆ, ನಿಮ್ಮ ಹಲ್ಲುಗಳಿಂದ ಕಬ್ಬಿಣವನ್ನು ಅಗಿಯುವಂತೆ, ಅಥವಾ ತಲೆಯ ಮೇಲೆ ದೊಡ್ಡ ಕಲ್ಲನ್ನಿಟ್ಟುಕೊಂಡು ಶಿಖರದ ತುದಿ ಹತ್ತುವಂತೆ ಮೂರ್ಖತನ ಮಾಡುತ್ತಿದ್ದೀರಿ."

ಬಿದ್ದರೂ ಮೀಸೆ ಮಣ್ಣಾಗದವನಂತೆ ನಟಿಸುತ್ತ ಮಾರ ಶಾಕ್ಯ ಕುಲಪತಿಯ ರೂಪವನ್ನು ಧರಿಸಿ ಬುದ್ಧನ ಬಳಿಗೆ ಬಂದು ಹೀಗೆ ನುಡಿಯುತ್ತಾನೆ: "ನಾನು ಬಹಳ ಹಿಂದೆಯೆ ನೀನು ಬುದ್ಧನಾಗುವೆ ಎಂದು ಭವಿಷ್ಯ ನುಡಿದಿದ್ದೆ. ನಿನ್ನನ್ನು ಹಿಂದೆಯೆ ಪೂಜಿಸಿದ್ದೆ. ನನ್ನ ಆಶೀರ್ವಾದದಿಂದಲೇ ನೀನೀಗ ತಥಾಗತ ಬುದ್ಧನಾಗಿರುವೆ. ನೀನೀಗ ನಿನ್ನ ರಾಜ್ಯಕ್ಕೆ ಹಿಂದಿರುಗಿ ನೀನು ಗಳಿಸಿಕೊಂಡ ರತ್ನತ್ರಯಗಳ ಮೇಲೆ ಧ್ಯಾನ ಮಾಡು. ನಿನ್ನ ತಂದೆ-ತಾಯಿಗಳಿಗೆ ಮತ್ತು ಪತ್ನಿ ಯಶೋಧರೆಗೆ ಆನಂದವನ್ನು ನೀಡು. ಸಹಸ್ರ ಸಂಖ್ಯೆಯಲ್ಲಿ ಪುತ್ರರನ್ನು ಹೊಂದಿ ಯಾಮವೆಂಬ ಸ್ವರ್ಗದಿಂದ ಮೊದಲ್ಗೊಂಡು ಎಲ್ಲ ಲೋಕಗಳಿಗೂ ಒಡೆಯನಾಗು. ನೀನು ಧರ್ಮಕ್ಕೆ ಅಧಿಪತಿಯಾಗಿರುವುದರಿಂದ, ನಿನ್ನ ಮಕ್ಕಳೆಲ್ಲರೂ ತಥಾಗತರಾಗುವರು. ಸೃಷ್ಟಿ-ಪ್ರಲಯಗಳು ನಿನ್ನ ಅಧೀನವಾಗುವುವು."

ಅದಕ್ಕೆ ಬುದ್ಧನು ಹೀಗೆ ಹೇಳುತ್ತಾನೆ: "ನಾಚಿಕೆ ಇಲ್ಲದವನೆ! ಕೇಳು. ನೀನು ಶಾಕ್ಯಕುಲದ ಅಧಿಪತಿಯಲ್ಲ, ನೀನು ಮಾರ. ನಿನ್ನಂಥವರು ಲಕ್ಷ ಸಂಖ್ಯೆಯಲ್ಲಿ ಬಂದರೂ ನನ್ನನ್ನೇನೂ ಮಾಡಲಾರರು. ಕಾಲ ಬಂದಾಗ ನಾನು ನನ್ನ ರಾಜ್ಯಕ್ಕೆ ಹೋಗುವೆ. ಜಗತ್ತಿಗೆ ಶುದ್ಧವಾದ ಆನಂದದ ಉಪದೇಶ ಮಾಡುತ್ತೇನೆ. ನೀನು ಸಂಪೂರ್ಣವಾಗಿ ಸೋತುಹೋಗಿರುವೆ. ಹೊರಡು ಇಲ್ಲಿಂದ. ನಾನು ಧರ್ಮಚಕ್ರವನ್ನು ಪ್ರವರ್ತನ ಮಾಡಲು ವಾರಾಣಸಿಗೆ ಹೋಗುವೆ." ಆಗ ಮಾರನು, "ಓ, ನಾನಿನ್ನು ಕೆಟ್ಟೆ!" ಎಂದು ಕೂಗುತ್ತ ಓಡಿ ಹೋದನು.

**ದೃಶ್ಯ-೬ :** ಬುದ್ಧ ತನ್ನ ಮೊದಲ ಅರುವತ್ತು ಮಂದಿ ಶಿಷ್ಯರನ್ನು ಧರ್ಮಪ್ರಚಾರ ಮಾಡಲು ಕಳಿಸಿಕೊಟ್ಟ ನಂತರ ಮಾರ ಅವನ ಬಳಿ ಬಂದು ನುಡಿಯುತ್ತಾನೆ, "ಹೇಗೆ ಎಲ್ಲಾ ಮನುಷ್ಯರೂ ದೇವತೆಗಳೂ ನನ್ನ ಪಾಶದಿಂದ ಕಟ್ಟಲ್ಪಟ್ಟಿದ್ದಾರೋ, ಹಾಗೆ ನೀನೂ ಕೂಡ ನನ್ನ ಪಾಶದಿಂದ ಕಟ್ಟಲ್ಪಟ್ಟಿದ್ದೀಯೆ. ನನ್ನಿಂದ ನೀನು ಬಿಡಿಸಿಕೊಳ್ಳಲು ಸಾಧ್ಯವೇ ಇಲ್ಲ." ಬುದ್ಧನು ಮಾರನನ್ನು ಗುರುತಿಸಿದ ಕೂಡಲೇ ಮಾರನು ಅಲ್ಲಿಂದ ಕಾಲ್ತೆಗೆಯುತ್ತಾನೆ.

**ದೃಶ್ಯ-೭ :** ಹಿಂದೊಮ್ಮೆ ಬುದ್ಧನಿಗೆ ದೇಹವನ್ನು ತ್ಯಜಿಸುವಂತೆ ಮಾರ ಸಲಹೆ ನೀಡಿದ್ದ. ಅದೇ ರೀತಿ ಪುನಃ ಕಾಪಾಲಚೇತಿಯ ಎಂಬಲ್ಲಿ ಬುದ್ಧನ ಅಂತ್ಯಕಾಲದಲ್ಲಿಯೂ ಅವನ ಬಳಿ ಬಂದು ಹೇಳುತ್ತಾನೆ, "ಪ್ರಭು, ನೀನು ನಿನ್ನ ಧರ್ಮವನ್ನು ನಿನ್ನ ಇಚ್ಛೆಯಂತೆ ಎಲ್ಲೆಡೆಗೂ ಹರಡಿರುವೆ. ಈಗಲಾದರೂ ಮಹಾನಿರ್ವಾಣವನ್ನು ಪ್ರವೇಶಿಸು, ನಿನ್ನ ಮರ್ತ್ಯಲೀಲೆಯನ್ನು ಅಂತ್ಯಗೊಳಿಸು." ಬುದ್ಧನು ಮಂದಹಾಸ ಬೀರುತ್ತ, "ತಥಾಗತನ ಮಹಾನಿರ್ವಾಣಕ್ಕೆ ಹೆಚ್ಚು ಸಮಯವಿಲ್ಲ; ಇಂದಿನಿಂದ ಮೂರನೆ ತಿಂಗಳಿಗೆ ತಥಾಗತನ ಅಂತ್ಯವಾಗುತ್ತದೆ, ಸಂತೋಷಪಡು" ಎಂದು ಉತ್ತರಿಸುತ್ತಾನೆ.

### ಉಪಸಂಹಾರ

ಮಾರನ ಬಾಹುಗಳು ಬಹಳ ದೀರ್ಘ. ಅದು ಬ್ರಹ್ಮಲೋಕದವರೆಗೂ ವಿಸ್ತರಿಸಿರುವುದು ನಮಗೆ ಮೇಲಿನ ಘಟನೆಗಳಿಂದ ತಿಳಿದುಬರುತ್ತದೆ. ಆಧ್ಯಾತ್ಮಿಕ ಜೀವನದಲ್ಲಿ ಕಾಲಿಡದವನಿಗೆ ಮಾರನ ತೊಂದರೆಯೆ ಇಲ್ಲ. ಆದರೆ ಯಾರು ಆಧ್ಯಾತ್ಮಿಕ ಜೀವನವನ್ನು ಪ್ರಾಮಾಣಿಕತೆಯಿಂದ ಅನುಸರಿಸಬೇಕೆಂದು ಸಂಕಲ್ಪಿಸುವರೋ ಅವರೆಲ್ಲರೂ ಮೊದಲಿನಿಂದ ಕೊನೆಯವರೆಗೂ ಈತನ ವೈರ ಕಟ್ಟಿಕೊಳ್ಳಲೇಬೇಕು; ತಮ್ಮ ಜೀವನವನ್ನು ಯುದ್ಧರಂಗವನ್ನಾಗಿ ಮಾಡಿಕೊಳ್ಳಬೇಕು; ಆದರೆ ಈ ಸಂಗ್ರಾಮದಲ್ಲಿ ಬುದ್ಧನಂತೆ ಗೆದ್ದು ಎದ್ದು ನಿಲ್ಲಬೇಕು. ಬುದ್ಧ ಹಾಗೂ ಮಾರರ ಸಂಘರ್ಷ ನಮಗೆ ಈ ಪಾಠವನ್ನು ಕಲಿಸುತ್ತದೆ. ಬುದ್ಧನ ಪ್ರಕಾರ ಮಾರನನ್ನು ಗೆಲ್ಲಬೇಕಾದರೆ ವಿಷಯಾಸಕ್ತಿಯನ್ನು ತ್ಯಜಿಸಬೇಕು, ಎಚ್ಚರಿಕೆಯನ್ನು ಬೆಳೆಸಿಕೊಳ್ಳಬೇಕು, ಒಟ್ಟಿನಲ್ಲಿ ಹೇಳುವುದಾದರೆ ಅಷ್ಟಾಂಗಮಾರ್ಗವನ್ನು ಅನುಸರಿಸಬೇಕು.